Power subsidy - Scheme-1
- Less than 10 HP

(2)

ಕರ್ನಾಟಕ ಸರ್ಕಾರ ನಡಾವಳಿಗಳು

ವಿಷಯ: ನೇಕಾರರಿಗೆ ವಿಶೇಷ ಪ್ಯಾಕೇಜ್ ನೀಡುವ ಬಗ್ಗೆ.
ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ ವಾಕೈ 110 ಜಕೈಇ 2003.
ದಿನಾಂಕ:26.02.2004.

****

ಪ್ರಸ್ತಾವನೆ :-

ರಾಜ್ಯದಲ್ಲಿನ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿದ ನಂತರ ಅವುಗಳಿಗೆ ಪರಿಹಾರ ನೀಡುವ ದಿಸೆಯಲ್ಲಿ ನೇಕಾರರಿಗೆ ವಿವಿಧ ಸವಲತ್ತುಗಳನ್ನು ಹೊಂದಿದ ವಿಶೇಷ ಪ್ಯಾಕೇಜನ್ನು ಮೇಲೆ ಓದಲಾದ ಆದೇಶದಲ್ಲಿ ಮಂಜೂರು ಮಾಡಲಾಗಿತ್ತು. ನಂತರ ಆ ಪ್ಯಾಕೇಜ್‌ನಲ್ಲಿ ಕೆಲವು ಸವಲತ್ತುಗಳನ್ನು ಮಾರ್ಪಡಿಸುವ ಅವಶ್ಯಕತೆ ಕಂಡುಬಂದಿರುತ್ತದೆ. ಆದ್ದರಿಂದ ಅಂತಹ ಸವಲತ್ತುಗಳ ಕುರಿತಂತೆ ಪುನಃ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 70 ಜಕೈಇ 2004, ಬೆಂಗಳೂರು, ದಿನಾಂಕ:09ನೇ ನವೆಂಬರ್ 2004

ಆ ಹಿನ್ನೆಲೆಯಲ್ಲಿ ರಾಜ್ಯದ ನೇಕಾರರಿಗೆ ಮಾರ್ಪಡಿಸಿದ ವಿಶೇಷ ಪ್ಯಾಕೇಜನ್ನು ಈ ಕೆಳಗಿನಂತೆ ಸರ್ಕಾರ ಮಂಜೂರು ಮಾಡಿರುತ್ತದೆ.

(ರೂ. ಕೋಟಿಗಳಲ್ಲಿ)

1. 10ಹೆಚ್.ಪಿ ವಿದ್ಯುತ್ ಸಂಪರ್ಕ ಹೊಂದಿರುವ 10 ವಿದ್ಯುತ್ ಮಗ್ಗಗಳಿಗೆ ಸಂಬಂಧಿಸಿದಂತೆ ಇತರ ಮಗ್ಗಪೂರ್ವ ಚಟುವಟಿಕೆಗಳಿಗೂ (ಪೊರಮಿಷನ್ ಇತ್ಯಾದಿ) ಅನ್ವಯಿಸುವಂತೆ ಒಂದು ಯೂನಿಟ್‌ಗೆ ರೂ.1.25ಗಳ ದರ ನಿಗಧಿಪಡಿಸಿ, ಹಾಲಿ ಜಾರಿಯಲ್ಲಿರುವ ವಿದ್ಯುತ್ ದರ ಹಾಗೂ ಸಬ್ಸಿಡಿ ದರ ಇವುಗಳ ವ್ಯತ್ಯಾಸದ ಮೊತ್ತವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಇವರಿಗೆ ಸರ್ಕಾರ ಪಾವತಿಸುವುದು. 13.25
2. ನೇಕಾರರಿಗೆ 'ಯಶಸ್ವಿನಿ ಯೋಜನೆ'ಯ ಮಾದರಿಯಲ್ಲಿ ಆರೋಗ್ಯ ಯೋಜನೆಯನ್ನು ಜಾರಿಗೆ ತರುವುದು (ಸದ್ಯಕ್ಕೆ ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು, ಪ್ರಾಥಮಿಕ ವಿದ್ಯುತ್ ಮಗ್ಗಗಳ ನೇಕಾರರ ಸಂಘಗಳು ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಇದರಡಿ ಸೊಂದಾಯಿಸಿದ ನೇಕಾರರಿಗೆ ಅಳವಡಿಸಿ, ನಂತರ ಇತರ ನೇಕಾರರಿಗೆ ವಿಸ್ತರಿಸುವುದು). 1.00
3. ನೇಕಾರರು ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ವ್ಯಾಪ್ತಿಗೆ ಬರುವ ಯೋಜನೆಗಳಡಿ ಸರ್ಕಾರದಿಂದ ಪಡೆದ ಸಾಲಗಳ ಮೇಲಿನ ಬಡ್ಡಿ ಹಾಗೂ ಸುಸ್ತಿಬಡ್ಡಿಯನ್ನು ಮನ್ನಾ ಮಾಡುವುದು. [illegible].83

4. ಕರ್ನಾಟಕ ಕೈಮಗ್ಗ ತರಬೇತಿ ಸಂಸ್ಥೆ, ಗದಗ್ ಹಾಗೂ ಆಡ್ಡಾಸ್ಸಡ್ ಕೈಮಗ್ಗ ಸಂಸ್ಥೆ, ಜಮಖಂಡಿ, ಇವರಿಗೆ ತಲಾ 15.00ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ಆವರ್ತಕ ವೆಚ್ಚ ಭರಿಸಲು. 0.30
5. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಮಾಖಾಂಬರ ಸಾವಿರ ನೇಕಾರರಿಗೆ ಕಚ್ಚಾ ಮಾಲು ಖರೀದಿಸಲು ಬಡಿಯುವ ಬಂಡವಾಳ (Working Capital) ಒದಗಿಸುವುದು. 1.00
6. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಇವರಿಗೆ ಮಾರ್ಜಿನ್ ಮನಿ ಒದಗಿಸುವುದು. 2.00
7. ದೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಪವರ್ ಲೂಮ್ ಪಾರ್ಕ್ ಸ್ಥಾಪಿಸುವುದನ್ನು ಇಲಾಖಾ ಕಾರ್ಯಕ್ರಮಗಳಲ್ಲಿ ಅಳವಡಿಸುವುದು. -

ಈ ಮೇಲೆ ಕ್ರಮಸಂಖ್ಯೆ (1)ರಲ್ಲಿ ನಮೂದಿಸಿರುವ ಸೌಲಭ್ಯವು ದಿನಾಂಕ:2.10.2004ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆ.

2004-05ನೇ ಸಾಲಿನಲ್ಲಿ 'ನೇಕಾರರ ಪ್ಯಾಕೇಜ್'ಗೆ ಲೆಕ್ಕಶೀರ್ಷಿಕೆ 2851-00-103-0-62 (ಯೋಜನೆ)ರ ಅಡಿ ಒದಗಿಸಿರುವ ರೂ.20.00ಕೋಟಿಗಳ ಜೊತೆಗೆ ರೂ.6.00ಕೋಟಿಗಳನ್ನು ಹೆಚ್ಚುವರಿ ಅನುದಾನ ಒದಗಿಸಲಾಗಿದೆ.

ಈ ಹಿಂದೆ ಆದೇಶ ಸಂಖ್ಯೆವಾಕೈ 110 ಜಕೈಇ 2003, ದಿನಾಂಕ:26.02.2004ರಲ್ಲಿ ಮಂಜೂರು ಮಾಡಿರುವ ಇತರೆ ಸವಲತ್ತುಗಳು ಹಾಗೆಯೇ ಮುಂದುವರಿಯುತ್ತವೆ.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಆಇ 1905 ವೆಚ್ಚ-1/2004, ದಿನಾಂಕ:6.11.2004ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ಕರಿಯಪ್ಪ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ದೆಂಗಳೂರು, (ಇದನ್ನು ಮುಂದಿನ ರಾಜ್ಯಪತ್ರದ ಸಂಚಿಕೆಯಲ್ಲಿ ಪ್ರಕಟಿಸಿ, 150 ಮುದ್ರಿತ ಪ್ರತಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬಹು ಮಹಡಿ ಕಟ್ಟಡ, ಇಲ್ಲಿ ಕಳುಹಿಸಿಕೊಡುವಂತೆ ಕೋರುತ್ತಾ).

ಪ್ರತಿ ಇವರಿಗೆ: